## ನಮ್ಮ ಕಾಲದ ಕಥೆ

ಲಾಕ್‌ಡೌನ್ ಕಾರಣದಿಂದ ಖಾಸಗಿ ವಾಹಿನಿಗಳು ಧಾರಾವಾಹಿಗಳನ್ನು ಮರುಪ್ರಸಾರ ಮಾಡುತ್ತಿರುವುದು ನಿಜಕ್ಕೂ ಸಂತಸದ ವಿಷಯ. ಮೊದಲು ಕೆಲಸಕ್ಕೆ ಹೋಗುವ ಕಾರಣ ಧಾರಾವಾಹಿಗಳನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ವಾಹಿನಿಯ ಖಾತೆಯಲ್ಲಿ ಬರುವ ಪ್ರೋಮೊಗಳನ್ನು ನೋಡಿ ಧಾರಾವಾಹಿ ನೋಡಿದಷ್ಟೇ ಖುಷಿಪಡುತ್ತಿದ್ದೆ. ಆದರೆ ಈಗ ಧಾರಾವಾಹಿಯ ಸಂಪೂರ್ಣ ಎಪಿಸೋಡ್‌ಗಳನ್ನು ನೋಡಿ ಖುಷಿಯಾಗುತ್ತಿದೆ. ಅದರಲ್ಲೂ ನನಗೆ ಝೀ ಕನ್ನಡದ 'ಜೊತೆ ಜೊತೆಯಲಿ' ಎಂದರೆ ಬಹಳ ಪ್ರೀತಿ. ಮಧ್ಯಮ ವರ್ಗದ ಜನರ ಕಷ್ಟಗಳನ್ನು ಕಣ್ಣಿಗೆ ಕಟ್ಟುವಂತೆ ತೋರಿಸಿರುವ ಈ ಧಾರಾವಾಹಿ ನಮ್ಮ ಮನೆಯಲ್ಲಿ ಎಲ್ಲರಿಗೂ ಇಷ್ಟ. ಅನು ಸಿರಿಮನೆ, ಸುಬ್ಬು ಹಾಗೂ ಪುಷ್ಪಾ ಪಾತ್ರಗಳು ನಮ್ಮ ನಡುವೆ ಪಾತ್ರಗಳು ಎನ್ನಿಸುತ್ತವೆ. ಅನು ಸಿರಿಮನೆಯಂತಹ ಮಗಳು ತಮಗೂ ಇರಬೇಕು ಎಂದು ತಂದೆ–ತಾಯಿಗಳು ಅಂದುಕೊಂಡರೆ, ಸುಬ್ಬು, ಪುಷ್ಪಾರಂತಹ ತಂದೆ–ತಾಯಿಗಳು ನಮಗೂ ಇರಬೇಕು ಎಂದು ಮಕ್ಕಳು ಅಂದುಕೊಳ್ಳುತ್ತಾರೆ. ಇಂದಿನ ಜನರೇಷನ್‌ಗೆ ಹೊಂದುವಂತಹ ಒಳ್ಳೆಯ ಧಾರಾವಾಹಿ 'ಜೊತೆಜೊತೆಯಲಿ'.

—ಹುಣ್ಣಿಮೆ, ಬೆಂಗಳೂರು

## ಸುವರ್ಣ ಮಹಾಭಾರತ ಎಲ್ಲಿ?

ಇತ್ತೀಚೆಗಷ್ಟೇ ಸ್ಟಾರ್ ಸುವರ್ಣ ವಾಹಿನಿಯವರು ಏಪ್ರಿಲ್ 13ರಿಂದ 9ಕ್ಕೆ 'ಮಹಾಭಾರತ' ಧಾರಾವಾಹಿಯನ್ನು ಪ್ರಸಾರ ಮಾಡುತ್ತೇವೆಂದು ಆಗಾಗ ಪ್ರೋಮೊ ತೋರಿಸುತ್ತಿದರು. ನಾವು ತುಂಬಾ ಖುಷಿಪಟ್ಟಿದ್ದೆವು. ಆದರೆ ಏಪ್ರಿಲ್ 13 ಬಂತು ಸಮಯ 9 ಗಂಟೆಯೂ ಆಯಿತು. ನೋಡಿದರೆ ಮಹಾಭಾರತ ಧಾರಾವಾಹಿ ಪ್ರಸಾರವಾಗಲೇ ಇಲ್ಲ. ಇದು ನಮಗೆ ತುಂಬಾ ನಿರಾಸೆಯನ್ನು ಉಂಟುಮಾಡಿತು. ಕಾರಣ ಏನೆಂದು ತಿಳಿಯಲು ಫೇಸ್‌ಬುಕ್ಕಿನಲ್ಲಿ ಇರುವ ಸ್ಟಾರ್ ಸುವರ್ಣ ಪೇಜ್‌ನಲ್ಲಿ ಹುಡುಕಾಡಿದರೂ ಉತ್ತರ ಸಿಗಲಿಲ್ಲ. ಆದರೆ ಕೆಲವು ವೀಕ್ಷಕರು ಕಾಮೆಂಟ್ ಬಾಕ್ಸ್ ಅಲ್ಲಿ 'ಮಹಾಭಾರತ'ದ ಪ್ರಸಾರಕ್ಕೆ ಸಂಬಂಧಿಸಿದಂತೆ ನಾನಾ ಬಗೆಯ ಕಾಮೆಂಟ್ ಮಾಡಿದ್ದರು. ಈ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಬೇಸರದ ಸಂಗತಿ ಎಂದರೆ ಅವರು ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ನಮಗೂ ಅದಕ್ಕೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿರುವುದು ಸಮಂಜಸವಲ್ಲ. ಇನ್ನಾದರೂ ಸ್ಟಾರ್ ಸುವರ್ಣ ವಾಹಿನಿಯವರು ಎಚ್ಚೆತ್ತುಕೊಳ್ಳಬೇಕು. ಆದಷ್ಟು ಬೇಗ 'ಮಹಾಭಾರತ' ಧಾರಾವಾಹಿ ಪ್ರಸಾರ ಮಾಡಿ. ಕನಿಷ್ಠ ಪಕ್ಷ ವೀಕ್ಷಕರ ಪ್ರಶ್ನೆಗೆ ಉತ್ತರಿಸಿ.

—ಅಂಜನ್ ಕುಮಾರ್ ಎಂ.ಎಸ್.

## ಸುಂದರ ಸರಸಮ್ಮನ ಸಮಾಧಿ

ವಾರದ ಪತ್ರ




ಕೊರೊನಾ ಸೋಂಕು ಹರಡುವುದನ್ನು ತಡೆಯುವ ಹಿನ್ನೆಲೆಯಲ್ಲಿ ಮನೆಯಲ್ಲಿಯೇ ಇರುವಂತೆ ಸರಕಾರದ ಆದೇಶದ ಅನುಸಾರ ಬಹುತೇಕ ಮಂದಿ ಮನೆಯಲ್ಲಿ ಕಾಲ ಕಳೆಯುತ್ತಿದ್ದಾರೆ. ಅನೇಕ ವಾಹಿನಿಗಳು ತಮ್ಮ ಸಂಗ್ರಹದಲ್ಲಿರುವ ಜನಪ್ರಿಯ ಧಾರಾವಾಹಿಗಳನ್ನು ಮರು ಪ್ರಸಾರ ಮಾಡುತ್ತಿವೆ. ದೂರದರ್ಶನದ ಚಂದನವಾಹಿನಿಯು ಅಂತಹ ಪ್ರಯತ್ನವಾಗಿ ಕನ್ನಡದ ಉತ್ತಮ ಕಾದಂಬರಿ 'ಸರಸಮ್ಮನ ಸಮಾಧಿ' (ಕೆ. ಶಿವರಾಮ ಕಾರಂತ)ಯನ್ನು ಚಿತ್ರರೂಪದಲ್ಲಿ ಹಲವು ಕಂತುಗಳಲ್ಲಿ ಮರುಪ್ರಸಾರ ಮಾಡುತ್ತಿದೆ.

ಮಂಥನ ಫಿಲ್ಮ್ ಸೊಸೈಟಿಯ ಲಾಂಛನದಲ್ಲಿ ಸಿದ್ಧಗೊಂಡ ಈ ಚಿತ್ರದಲ್ಲಿ ನಿಸರ್ಗದ ಸೌಂದರ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. 1937ರಲ್ಲಿ ರಚಿತವಾದ ಈ ಕಾದಂಬರಿ, ಆ ಕಾಲದಲ್ಲಿ ಪ್ರಚಲಿತವಿದ್ದ ಸತಿ ಸಹಗಮನ ಪದ್ಧತಿ ಮತ್ತು ವೈವಾಹಿಕ ಕಟ್ಟುಪಾಡುಗಳ ವಸ್ತುವನ್ನು ಒಳಗೊಂಡಿತ್ತು. ಅದು ಸಾಮಾಜಿಕ ವ್ಯವಸ್ಥೆಯ ಕಂದಾಚಾರವನ್ನು ವಿಶೇಷ ರೀತಿಯಲ್ಲಿ ವಿಶ್ಲೇಷಿಸುತ್ತದೆ.

ಹೆಣ್ಣಿನ ವಿರುದ್ಧ ನಡೆಯುವ ಶೋಷಣೆಯ ಜೊತೆಗೆ ಹೆಣ್ಣು ತನ್ನ ಸ್ವಂತ ವಸ್ತು, ಅದನ್ನು ತನ್ನ ನಿಗಾದಲ್ಲಿಯೇ ಇರಿಸಿಕೊಂಡು ಆಟವಾಡುವ ಗಂಡಿನ ಅಹಮಿಕೆಯನ್ನು ಬಹಳ ನೈಜವಾಗಿ ಚಿತ್ರಿಸಿದೆ. ಹಲವು ಕಟ್ಟುಪಾಡುಗಳ ಜೊತೆ ದೆವ್ವ, ಭೂತ, ನಂಬಿಕೆ, ಮೂಢನಂಬಿಕೆಗಳ ಬಗ್ಗೆ ವೈಚಾರಿಕ ಹಿನ್ನೆಲೆಯಲ್ಲಿ ಪಾತ್ರಗಳ ಮೂಲಕ ಚರ್ಚಿಸಲಾಗಿದೆ. ಸಂಗೀತ ನಿರ್ದೇಶನವನ್ನು ಪ್ರವೀಣ್ ಡಿ. ರಾವ್ ಮಾಡಿದ್ದು ಚಿತ್ರದ ಸಂದರ್ಭಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಿದ್ದಾರೆ. ಬಹಳಷ್ಟು ರಂಗಭೂಮಿಯ ಕಲಾವಿದರು ನಟಿಸಿದ್ದಾರೆ.

ಚಿತ್ರದಲ್ಲಿ ದಕ್ಷಿಣ ಕನ್ನಡ ಭಾಷೆ ತುಂಬಾ ಆಪ್ತವೆನಿಸುತ್ತದೆ. ಕಾದಂಬರಿಯ ಮರು ಓದಿಗೆ ತವಕ ಹುಟ್ಟಿಸುವ ಸುಂದರ ಚಿತ್ರರೂಪವಾಗಿದೆ. ಸಾಹಿತ್ಯ ಓದಿಗೆ ಪ್ರೋತ್ಸಾಹ ನೀಡುವ ಇಂಥ ಮೌಲ್ಯಯುತ ಕಾರ್ಯಕ್ರಮಗಳು ಇನ್ನಷ್ಟು ಬರಲಿ.

—ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ

## ಸುದ್ದಿ ಎಂಬ ಹಿಂಸಾ ಆನಂದ

ಲಾಕ್‌ಡೌನ್ ಸಂದರ್ಭದಲ್ಲಿ ಟೀವಿಯಲ್ಲಿ ಬರುವ ಖಾಸಗಿ ಸುದ್ದಿ ವಾಹಿನಿಗಳ ವಾರ್ತೆಯ ಆರ್ಭಟ ಕೆಲವೊಮ್ಮೆ ಹಿಂಸೆ ಎನ್ನಿಸುತ್ತದೆ. ಸುದ್ದಿ ವಾಚಕರು ಸುದ್ದಿಯನ್ನು ಓದುವಾಗ ಅರಚಾಟ, ಕಿರುಚಾಟ ನಡೆಸುವುದ್ಯಾಕೆ? ನೋಡುಗರನ್ನು ಗಾಬರಿ ಹುಟ್ಟಿಸುವಂತೆ ವಾರ್ತೆ ಓದುವುದ್ಯಾಕೆ? ಅನಗತ್ಯವಾಗಿ ಹೀನಾರ್ಥ ಪದ ಪ್ರಯೋಗ ಮಾಡುವ ಔಚಿತ್ಯವಾದರೂ ಏನಿದೆ? ಸುದ್ದಿ ಎಂದರೆ ಘಟನೆಗಳನ್ನು ಅನಾವರಣ ಮಾಡಬೇಕೇ ವಿನಃ ಘಟನೆ ಹೀಗಿರಬೇಕಿತ್ತು. ಹಾಗಿರಬೇಕಿತ್ತು. ಹೀಗೆ ಅದು ಏಕಾಯಿತು ಎಂದು ಸ್ವಂತ ಅಭಿಪ್ರಾಯಗಳನ್ನು ಹೇಳುತ್ತಾ ಕಾಲಹರಣ ಮಾಡುವುದು ಮಾಧ್ಯಮದ ಮೌಲ್ಯಕ್ಕೆ ಸರಿ ಹೊಂದುವುದಿಲ್ಲ.

ಬಹುತೇಕ ಎಲ್ಲರ ಮನೆಯಲ್ಲಿ ವೃದ್ಧರು, ಎಳೆಯ ಮಕ್ಕಳು, ಮಾನಸಿಕ–ದೈಹಿಕ ಆರೋಗ್ಯ ತೊಂದರೆ ಇರುತ್ತಾರೆ. ಟೀವಿಗಳ ಆರ್ಭಟಕ್ಕೆ ಅವರ ಕರ್ಕಶ ಕೂಗಾಟ ಏನಾದರೂ ಅನಾಹುತವನ್ನು ಉಂಟು ಮಾಡಿದರೆ ಗತಿ ಏನು?

—ರಾಂಚಂದ್ರ ಕೊಪ್ಪಲು ತೀರ್ಥಹಳ್ಳಿ

## ಕನ್ನಡದ ಕೊಲೆ ಸಾಗಿದೆ

'ರೈಲು ಬೋಗಿಯಲ್ಲಿ ತಬ್ಲಿಘಿ' ಪ್ರಯಾಣ ಮಾಡುವುದನ್ನು ನೋಡಿ 'ಹನುಮಾನ' ಬಂದು ಟೆಸ್ಟ್ ಮಾಡಿಸಿದರು. 'ಹಾವಾಗ' ಅವರ 'ಹಾರೊಗ್ಯದಲ್ಲೇನು' 'ಹೇರು ಪೇರು' ಇರ್ಲಿಲ್ಲ. 'ಹಾದ್ರೆ ಟೆಸ್ಟ ಮಾಡ್ಸಿದಾಗ 'ಅವರ 'ಹನುಮಾನ' ನಿಜವಾಯ್ತು. ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಒಂದು ಕನ್ನಡ ಸುದ್ದಿ ವಾಹಿನಿಯ ವರದಿಗಾರನ ವರದಿಯ ತುಣುಕು ಇದು. ಕನ್ನಡ ಸುದ್ದಿ ವಾಹಿನಿಗಳಲ್ಲಿ ಹ್ರಸ್ವಸ್ವರ, ದೀರ್ಘಸ್ವರ, ಹಕಾರ ಅಕಾರಗಳ ವ್ಯತ್ಯಾಸ, ಒತ್ತಕ್ಷರ ಬಳಕೆಗಳ ಪರಿಜ್ಞಾನ ಇಲ್ಲವೆನ್ನುವುದು ಹಳೆಯ ಸುದ್ದಿ. ಆದರೆ, ಕನ್ನಡ ಭಾಷೆಯ ಕೊಲೆ ಈ ಮಟ್ಟಕ್ಕೆ ಇಳಿದು ಸಂತೆಯ ದಿನ ಮೂರು ಮೊಳ ನೇಯುವ ಕಾಟಾಚಾರವೇ?

ಅಷ್ಟು ಮಾತ್ರವಲ್ಲದೆ ಅಕ್ಷರ ದೋಷದ ಪರಿಣಾಮ ಅಪಾರ್ಥ ಅವಾಚ್ಯ ಅರ್ಥಗಳನ್ನೂ ನೀಡಿವೆ. ಒಂದು ಟೀವಿಯಲ್ಲಿ 'ಮುಖ್ಯಸ್ಥರ ಫೋಟೊ ಹಾಕಿ ಅದರ ಕೆಳಗಿನ ಸ್ಕ್ರೋಲಿಂಗ್‌ನಲ್ಲಿ ಚಿಕಿತ್ಸೆ ಫಲಕಾರಿ ಆಗದೆ ನಿಧನ' ಬಂದಿದ್ದ ಸಂಗತಿಯೂ ವಾಟ್ಸ್ಯಾಪ್‌ನಲ್ಲಿ ಹಂಚಿಕೆಯಾಗಿತ್ತು. ಮಾತ್ರವಲ್ಲ ಅಪಾರ್ಥ ನೀಡುವ ಪದಗಳು ಆಗಾಗ ಟೀವಿಯಲ್ಲಿ ಇಣುಕುತ್ತಲೇ ಇರುತ್ತವೆ. ಅಕ್ಷರ ವ್ಯತ್ಯಾಸ ಗೊತ್ತಿಲ್ಲದಿದ್ದರೆ 'ಆದರ' ಮತ್ತಿನ್ನೇನೋ ಆಗುತ್ತದೆ, ಆ ರೀತಿ ಆಗಿದೆ ಕೂಡ. ಮತ್ತೆ ಹಾಗೆ ಆಗದೆ ಇರಲಿ ಎನ್ನುವುದು ಕಾಳಜಿ.

—ರಮಾನಂದ ಶರ್ಮಾ, ನವದೆಹಲಿ